Round (1) ದಿನಾಂಕ ...

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1491
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 24.09.2021.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬೀದರ್ ಜಿಲ್ಲೆಯಲ್ಲಿನ ಹಲವು ಗ್ರಾಮಗಳಿಗೆ ಇನ್ನೂ ಕೂಡ ಬಸ್ಸು ಸಂಚಾರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಆ ಗ್ರಾಮಗಳು ಯಾವುವು; | ಬೀದರ ಜಿಲ್ಲೆಯಲ್ಲಿ ಒಟ್ಟು:667 ಗ್ರಾಮಗಳಿದ್ದು, 664 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಉಳಿದ 03 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ. |
| ಆ. | ಸದರಿ ಗ್ರಾಮಗಳ ಬಸ್ಸುಗಳು ಇಲ್ಲದೆ ಗ್ರಾಮಗಳಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು; | ಸದರಿ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸದೇ ಇರಲು ಕಾರಣವನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಇ) | ಬಸ್ಸು ಸಂಚಾರ ಇಲ್ಲದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಮೊಟಕುಗೊಂಡಿರುವುದೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಸಾರ್ವಜನಿಕ ಪ್ರಯಾಣಿಕರಿಗೆ ಹಾಗೂ ವಿದ್ಯಾರ್ಥಿಗಳ ಬೇಡಿಕೆಗನುಗುಣವಾಗಿ ಈಗಾಗಲೇ ಸಂಚಾರ ಸೌಕರ್ಯವನ್ನು ಕಲ್ಪಿಸಲಾಗಿರುತ್ತದೆ. ಇನ್ನೂ ಹೆಚ್ಚಿನ ಬೇಡಿಕೆಗಳು ಬಂದಲ್ಲಿ, ಪರಿಶೀಲಿಸಿ ಕ್ರಮ ಜರುಗಿಸಲಾಗುವುದು. |

ಸಂಖ್ಯೆ: ಟಿಡಿ 231 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

# ಅನುಬಂಧ-'ಅ'

| ಕ್ರ. ಸಂ | ತಾಲೂಕು | ಗ್ರಾಮದ ಹೆಸರು | ಸಾರಿಗೆ ಸೌಲಭ್ಯ ಒದಗಿಸದೇ ಇರಲು ಕಾರಣ | ಸದರಿ ಗ್ರಾಮಕ್ಕೆ ಪ್ರಸ್ತುತ ಎಲ್ಲಿವರೆಗೆ ಬಸ್ ಸೇವೆ ಒದಗಿಸಲಾಗಿದೆ |
|---|---|---|---|---|
| 1 | ಕಮಲನಗರ | ಮುತಖೇಡ | ಸದರಿ ಗ್ರಾಮವು ಮುಖ್ಯ ರಸ್ತೆಯಿಂದ 2.5 ಕಿ.ಮೀ ಅಂತರದಲ್ಲಿರುತ್ತದೆ. ಪ್ರಸ್ತುತ ರಸ್ತೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿ ಪೂರ್ಣಗೊಂಡ ನಂತರ ಸಾರಿಗೆ ಸೌಲಭ್ಯ ಒದಗಿಸಲಾಗುವುದು. | ಔರಾದ-ದಾಬಕಾ-ಉದಗೀರ ಮಾರ್ಗವಾಗಿ ಪ್ರತಿದಿನ 05 ಸರತಿಗಳ ಬಸ್ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |
| 2 | ಔರಾದ | ನಾಗೂರ (ಬಾಬಜಿ) | ಸದರಿ ಗ್ರಾಮವು ಮುಖ್ಯ ರಸ್ತೆಯಿಂದ 1.0 ಕಿ.ಮೀ ಅಂತರದಲ್ಲಿದ್ದು, ಗ್ರಾಮದ ಒಳಗೆ ಬಸ್ ತಿರುಗಿಸಲು ಸ್ಥಳ ಇರುವುದಿಲ್ಲ. | ಔರಾದ-ಸಂತಪೂರ-ಸಂಗಮ ಕ್ರಾಸ್ ಮಾರ್ಗ ವಾಗಿ ಭಾಲ್ಕಿಗೆ ಪ್ರತಿದಿನ 20 ಸರತಿಗಳ ಕಾರ್ಯಾಚರಣೆಯಲ್ಲಿದ್ದು, ಸದರಿ 20 ಸರತಿಗಳು ನಾಗೂರ (ಬಾಬಜಿ) ಮುಖ್ಯ ರಸ್ತೆಗೆ ನಿಲುಗಡೆ ಮಾಡುತ್ತಿವೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |
| 3 | ಭಾಲ್ಕಿ | ಏಕಲಾಸಪೂರ | ಸದರಿ ಗ್ರಾಮವು ಆನಂದವಾಡಿ ಗ್ರಾಮದಿಂದ 5.0 ಕಿ.ಮೀ ಅಂತರದಲ್ಲಿರುತ್ತದೆ. ಸದರಿ ಗ್ರಾಮಕ್ಕೆ ಇಲ್ಲಿಯವರೆಗೆ ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ. | ಭಾಲ್ಕಿ ಪಟ್ಟಣದಲ್ಲಿ ರಸ್ತೆಯು ತೀರಾ ಇಕ್ಕಟ್ಟಾಗಿರುವುದರಿಂದ ಬಸ್ ಕಾರ್ಯಚರಣೆಗೆ ಯೋಗ್ಯವಾಗಿರುವುದಿಲ್ಲ. ಅನಂದವಾಡಿವರೆಗೆ 03 ಸುತ್ತುವಳಿಗಳ ಬಸ್ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಸ್ಥರು/ ವಿದ್ಯಾರ್ಥಿಗಳು ಈ ಸರತಿಗಳ ಸದುಪಯೋಗ ಪಡೆಯುತ್ತಿದ್ದಾರೆ. |